**ಮಧ್ಯಂತರ ಅರ್ಜಿ ಸಂಖ್ಯೆ 5 ರ ಮೇಲಿನ ಆದೇಶಃ**

ಅರ್ಜಿದಾರರ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ 5 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ಹಾಗೂ ಸಹವಾಚಕ ಕಲಂ 151 ರಡಿಯಲ್ಲಿ ಸಲ್ಲಿಸಿ, 1 ನೇ ದಾವಾ ಷೆಡ್ಯೂಲ್ ಸ್ವತ್ತನ್ನು ಅಳತೆ ಮಾಡಲು ನ್ಯಾಯಾಲಯದ ನಿಯೋಗಿಯನ್ನು ತಾಲ್ಲೂಕು ಸರ್ವೇಯರ್ ಚನ್ನಪಟ್ಟಣ, ರಾಮನಗರ ಜಿಲ್ಲೆ ), ನೇಮಕ ಮಾಡಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ.

**ಷೆಡ್ಯೂಲ್ ಸ್ವತ್ತುಃ ನಂ.1**

ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ವಿರುಪಕ್ಷಿಪುರ ಹೋಬಳಿ, ಹೊನ್ನಿಗನಹಳ್ಳಿ ಗ್ರಾಮದ ಸರ್ವೆ ನಂ.89 ರಲ್ಲಿ 03.28 (ಮೂರು ಎಕರೆ ಇಪ್ಪತ್ತೆಂಟು ಗುಂಟೆ ಸ್ವತ್ತಿಗೆ ಚಕ್ಕು ಬಂದಿಃ

| | | |
|---|---|---|
| ಪೂರ್ವ | ಃ | ಸರ್ಕಾರಿ ರಸ್ತೆ, |
| ಪಶ್ಚಿಮ | ಃ | ಸರ್ಕಾರಿ ರಸ್ತೆ |
| ಉತ್ತರ | ಃ | ಬಸವರಾಜುರವರ ಸ್ವತ್ತು, |
| ದಕ್ಷಿಣ | ಃ | ಪುಟ್ಟರಾಜುರವರ ಜಮೀನು, |

2. 2 ನೇ ಅರ್ಜಿದಾರರು ಈ ಮಧ್ಯಂತರ ಅರ್ಜಿಯ ಜೊತೆಗೆ ಶಪಥ ಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ. 2 ನೇ ಅರ್ಜಿದಾರರು ದಾವಾ ಸ್ವತ್ತುಗಳಲ್ಲಿ ಭಾಗಂಶ ಕೋರಿ ಎದುರುದಾರರ ವಿರುದ್ಧ ಇದೇ ನ್ಯಾಯಲಯದಲ್ಲಿ ಅಸಲು ದಾವೆ ನಂ.08/2011 ನ್ನು ಸಲ್ಲಿಸಿದ್ದು, ನ್ಯಾಯಾಲಯವು ಸದರಿ ದಾವೆಯನ್ನು 1/7 ರಂತೆ ನಮಗೆ ಭಾಗಾಂಶವನ್ನು ನೀಡಿ ಆದೇಶ ಹೊರಡಿಸಿರುತ್ತದೆ, ನಂತರ ನಾವು ಅಂತಿಮ ಡಿಕ್ರಿಗಾಗಿ ಈ ದಾವೆಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆ. ಸದರಿ ದಾವೆಯಲ್ಲಿ (ಎರಡು) ದಾವಾ ಷೆಡ್ಯೂಲ್ ಸ್ವತ್ತುಗಳಿದ್ದು, ಆ ಪೈಕಿ 1 ನೇ ದಾವಾ ಸ್ವತ್ತು ರಾಮನಗರ ಜಿಲ್ಲೆ,

ಚನ್ನಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವಂತದ್ದಾಗಿರುತ್ತದೆ, ಸದರಿ 1 ನೇ ದಾವಾ ಸ್ವತ್ತನ್ನು ನ್ಯಾಯಾಲಯದ ನಿಯೋಗಿಯಿಂದ ಅಳತೆ (ತಾಲ್ಲೂಕು ಸರ್ವೇಯರ್ ಚನ್ನಪಟ್ಟಣ, ರಾಮನಗರ ಜಿಲ್ಲೆ ಮಾಡಿಸುವ ಸಲುವಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಿಸಬೇಕಾಗಿದ್ದು, ಸದರಿ 1 ನೇ ದಾವಾ ಸ್ವತ್ತನ್ನು ಅಳತೆ ಮಾಡಿಸುವ ಸಲುವಾಗಿ ಮತ್ತು ನ್ಯಾಯಾಲಯದ ನಿಯೋಗಿಯನ್ನು ನೇಮಿಸಲು ನ್ಯಾಯಾಲಯದ ಅದೇಶಕ್ಕಾಗಿ ನ್ಯಾಯಾಲಯದಲ್ಲಿ ಈ ಮಧ್ಯಕಾಲೀನ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಮಧ್ಯಕಾಲೀನ ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ ಎದುರುದಾರರಿಗೆ ಯಾವುದೇ ರೀತಿಯ ಕಷ್ಟ-ನಷ್ಟವುಂಟಾಗುವುದಿಲ್ಲ. ಒಂದು ವೇಳೆ ಸದರಿ ಅರ್ಜಿಯನ್ನು ತಿರಸ್ಕರಿಸಿದ್ದಲ್ಲಿ ತನಗೆ ತುಂಬಲಾರದ ಕಷ್ಟ ನಷ್ಟವುಂಟಾಗುತ್ತದೆ. ಆದ್ದರಿಂದ ನ್ಯಾಯಾಲಯವು ಈ ಮೇಲಿನ ಎಲ್ಲಾ ಅಂಶಗಳನ್ನು ಸತ್ಯ ಮತ್ತು ಸಮಾನತೆಯ ದೃಷ್ಟಿಯಿಂದ ಅವಲೋಕಿಸಿ, ಅರ್ಜಿದಾರರು ಅರ್ಜಿಯಲ್ಲಿ ಕೋರಿರುವಂತೆ, ಸದರಿ ದಾವೆಯ 1 ನೇ ದಾವಾ ಷೆಡ್ಯೂಲ್ ಸ್ವತ್ತನ್ನು ಅಳತೆ ಮಾಡಲು ನ್ಯಾಯಾಲಯದ ನಿಯೋಗಿಯನ್ನು (ತಾಲ್ಲೂಕು ಸರ್ವೇಯರ್ ಚನ್ನಪಟ್ಟಣ, ರಾಮನಗರ ಜಿಲ್ಲೆ ), ನೇಮಕ ಮಾಡಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ. **ಆದ್ದರಿಂದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.**

3. ಈ ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರನ್ನು ಸಲ್ಲಿಸಿರುವುದಿಲ್ಲ.

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

**<u>ಃಅಂಶಗಳುಃ</u>**

**1. ಈ ದಾವೆಯನ್ನು ಪರಿಣಾಮಕಾರಿಯಾಗಿ ತೀರ್ಮಾನಮಾಡಲು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ಸ್ಥಳೀಯ ತನಿಖೆ ಮಾಡಿಸಿ, ಅದರಿಂದ ವರದಿ ಪಡೆಯುವ ಅಗತ್ಯತೆ ಇದೆಯೇ?**

**2. ಮಾಡುವ ಆದೇಶ ಏನು?**

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಕಡತಗಳಲ್ಲಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

**ಅಂಶ ಸಂಖ್ಯೆ1 : ನಕಾರಾತ್ಮಕವಾಗಿ**
**ಅಂಶ ಸಂಖ್ಯೆ2 : ಅಂತಿಮ ಆದೇಶದಂತೆ ಈ**
**ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,**

## ಕಾರಣಗಳು

7. **ಅಂಶ ಸಂಖ್ಯೆ:1:** ವಾದಿಯು ಪ್ರಸ್ತುತ ಅರ್ಜಿಯನ್ನು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡುವಂತೆ ಕೋರಿ ಸಲ್ಲಿಸಿರುತ್ತಾರೆ.

8. ವಾದಿಯು ತನ್ನ ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರವು ಈ ಕೆಳಕಂಡಂತೆ ಇರುತ್ತದೆ. 2ನೇ ಅರ್ಜಿದಾರರು ದಾವಾ ಸ್ವತ್ತುಗಳಲ್ಲಿ ಭಾಗಂಶ ಕೋರಿ ಎದುರುದಾರರ ವಿರುದ್ಧ ಇದೇ ನ್ಯಾಯಲಯದಲ್ಲಿ ಅಸಲು ದಾವೆ ನಂ.08/2011 ನ್ನು ಸಲ್ಲಿಸಿದ್ದು, ನ್ಯಾಯಾಲಯವು ಸದರಿ ದಾವೆಯನ್ನು 1/7 ರಂತೆ ನಮಗೆ ಭಾಗಾಂಶವನ್ನು ನೀಡಿ ಆದೇಶ ಹೊರಡಿಸಿರುತ್ತದೆ, ನಂತರ ನಾವು ಅಂತಿಮ ಡಿಕ್ರಿಗಾಗಿ ಈ ದಾವೆಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆ. ಸದರಿ ದಾವೆಯಲ್ಲಿ (ಎರಡು) ದಾವಾ ಷೆಡ್ಯೂಲ್ ಸ್ವತ್ತುಗಳಿದ್ದು, ಆ ಪೈಕಿ 1ನೇ ದಾವಾ ಸ್ವತ್ತು ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವಂತದ್ದಾಗಿರುತ್ತದೆ, ಸದರಿ 1ನೇ ದಾವಾ ಸ್ವತ್ತನ್ನು ನ್ಯಾಯಾಲಯದ ನಿಯೋಗಿಯಿಂದ ಅಳತೆ (ತಾಲ್ಲೂಕು ಸರ್ವೇಯರ್ ಚನ್ನಪಟ್ಟಣ, ರಾಮನಗರ ಜಿಲ್ಲೆ ಮಾಡಿಸುವ ಸಲುವಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಿಸಬೇಕಾಗಿದ್ದು, ಸದರಿ 1ನೇ ದಾವಾ ಸ್ವತ್ತನ್ನು ಅಳತೆ ಮಾಡಿಸುವ ಸಲುವಾಗಿ ಮತ್ತು ನ್ಯಾಯಾಲಯದ ನಿಯೋಗಿಯನ್ನು ನೇಮಿಸಲು ನ್ಯಾಯಾಲಯದ ಆದೇಶಕ್ಕಾಗಿ ನ್ಯಾಯಾಲಯದಲ್ಲಿ ಈ ಮಧ್ಯಕಾಲೀನ ಅರ್ಜಿಯನ್ನು ಸಲ್ಲಿಸಿ ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

9. ಎದುರುದಾರರ ವಕೀಲರು ಸದರಿ ಅರ್ಜಿಗೆ ಯಾವುದೇ ತಕರಾರನು ಸಲ್ಲಿಸಿರುವುದಿಲ್ಲ .

10. ಈ ದಾವೆಯನ್ನು ಪರಿಣಾಮಕಾರಿಯಾಗಿ ತೀರ್ಮಾನ ಮಾಡಲು ಉಭಯ ಪಕ್ಷಗಾರರ ಮೌಖಿಕ ಮತ್ತು ದಸ್ತವೇಜು ಸಾಕ್ಷ್ಯಗಳು ಸಾಕಷ್ಟು ಇರುತ್ತದೆ. ಈ ಅರ್ಜಿಯನ್ನು ತೀರ್ಮಾನಿಸಲು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ವರದಿ ಪಡೆಯುವ ಅಗತ್ಯತೆ ಇರುತ್ತದೆ. ಈ ಎಲ್ಲಾ ಕಾರಣಗಳಿಂದ ವಾದಿಯು ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯು ಊರ್ಜಿತವಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಟ್ಟು **ಅಂಶ ಸಂಖ್ಯೆ:1 ಅನ್ನು ಸಕರಾತ್ಮಕವಾಗಿ ಉತ್ತರಿಸಿದೆ.**

11. **<u>ಅಂಶ ಸಂಖ್ಯೆ:2ಃ-</u>** ಈ ಮೇಲ್ಕಂಡ 1 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**<u>ಆದೇಶ</u>**

**ಅರ್ಜಿದಾರರು ಸಲ್ಲಿಸಿರುವ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ಹಾಗೂ ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:5 ನ್ನು ಪುರಸ್ಕರಿಸಲಾಗಿದೆ.**

**ತಾಲ್ಲೂಕು ಸರ್ವೆಯರ್, ಚನ್ನಪಟ್ಟಣ ರವರನ್ನು ದಾವಾ ಐಟಂ ನಂ.1 ರ ಸ್ವತ್ತನ್ನು ಅಳತೆ ಮಾಡಲು ನ್ಯಾಯಾಲಯದ ನಿಯೋಗಿ ಯಾಗಿ ನೇಮಕ ಮಾಡಲಾಗಿದೆ.**

**ನ್ಯಾಯಾಲಯದ ನಿಯೋಗಿಯ ಶುಲ್ಕ ರೂ.2000/- ಎಂದು ನಿಗದಿ ಪಡಿಸಲಾಗಿದೆ.**

**Issue commissioner warrant If PF and bata is paid.**

**Call on 18.10.2023.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ. ಎಫ್? ಸಿ., ಚನ್ನಪಟ್ಟಣ.